ಡಿ.ಡಬ್ಲ್ಯೂ : 3

ದಿನಾಂಕ : 15.11.2025 ರಂದು ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ವಾದಿ ಪರ **ಶ್ರೀ** ಎಸ್ ವಿ ಎ **ವಕೀಲರಿಂದ,**

**5.** ಈಗ ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ ಅದು 38 ಸೆಂಟ್ಸ್ ಜಮೀನು ಇದ್ದು, ಅದರಲ್ಲಿ ಒಂದು ಕಾಂಪೌಂಡ್ ವಾಲ್ ಮೂರು ಮನೆಗಳು ಮತ್ತು ಒಂದು ತೋಟಾ, ಖಾಲಿ ಜಾಗ ಇರುತ್ತದೆ ಎಂದುರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರವು ಪ್ರತಿವಾದಿ ಪರ ಶ್ರೀ ಕೆ ಎಮ್ ಆರ್ ವಕೀಲರ ಆಕ್ಷೇಪಣೆಗೆ ಒಳಗೊಂಡು ನಿಪಿಃ 42 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ ಅದರಲ್ಲಿ ನೀವು ವಾಸ ಮಾಡುತ್ತಿದ್ದಿರಿ ಮತ್ತು ಅದರ ಡೋರ್ ನಂಬರ್ 28 ಇರುತ್ತದೆ ಎಂದರೆ ಸಾಕ್ಷಿಯು ಹೌದು ನಾನು ಅದರಲ್ಲಿ ವಾಸ ಮಾಡುತ್ತಿದ್ದೇನೆ ಭಾವಚಿತ್ರ ನೋಡಿ ಡೋರ್ ನಂಬರ್ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರವನ್ನು ನಿಪಿಃ 43 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ ಅದು ಕಾಂಪೌಂಡ್ ವಾಲ್ ನಲ್ಲಿ ಇನ್ನೊಂದು ಗುಡಿಸಲು ಇರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರವನ್ನು ನಿಪಿಃ 44 ಎಂದು ಗುರುತಿಸಲಾಯಿತು. ನಿಪಿಃ 44 ಗುಡಿಸಲಿನಲ್ಲಿ ನಾನು ವಾಸಮಾಡುತ್ತಿದ್ದೇನೆ. ನಿಪಿಃ 44 ಗುಡಿಸಲಿನಲ್ಲಿ ಮೊದಲು ಯಾರು ವಾಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಮೊದಲು ಯಾರು ವಾಸ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ ಸದರಿ ಭಾವಚಿತ್ರದಲ್ಲಿ ಇರುವ ಮನೆಯಲ್ಲಿ ನಿಮ್ಮ ತಾಯಿ ಲಕ್ಷ್ಮಿಕಾಂತಮ್ಮ ರವರು ತಮ್ಮ ಕೊನೆಯ ಅವಧಿಯಲ್ಲಿ ಸದರಿ ಮನೆಯಲ್ಲಿ ಇರುತ್ತಿದ್ದರು ಎಂದರೆ ಸಾಕ್ಷಿಯು ಹೌದು ಸದರಿ ಮನೆ ಮತ್ತು ನನ್ನ ಮನೆಯಲ್ಲಿಯು ಇರುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರವನ್ನು ನಿಪಿಃ 45 ಎಂದು ಗುರುತಿಸಲಾಯಿತು. ನನ್ನ

ತಾಯಿಯು ನನ್ನ ಜೊತೆಗೆ ಇರಲಿಲ್ಲ ನಿಪಿಃ 45 ರಲ್ಲಿ ಇರುವ ಮನೆಯಲ್ಲಿ ಮಾತ್ರ ಇರುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಯ ಕೊನೆಯ ಅವಧಿಯಲ್ಲಿ ನನ್ನ ಅಕ್ಕ ತಂಗಿಯರು ಅವರನ್ನು ನೋಡಲು ಬಂದಿರುವಾಗ ನಾನು ಅವರನ್ನು ನೋಡಲು ಬಿಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ ಅದರಲ್ಲಿ ತೋಟಾ ಮತ್ತು ಖಾಲಿ ಜಾಗ ಇರುತ್ತದೆ ಎಂದರೆ ಸಾಕ್ಷಿಯು ಖಾಲಿ ಜಾಗದಲ್ಲಿ ಮಾವಿನ ಗಿಡ ಇದೆ ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರವನ್ನು ನಿಪಿಃ 46 ಎಂದು ಗುರುತಿಸಲಾಯಿತು.

**6.** ಕಾಂಪೌಂಡ್ ವಾಲ್ ಇರುವ 38 ಸೆಂಟ್ಸ್ ಜಮೀನು ನನ್ನ ತಂದೆಗೆ ಸೇರಿದ್ದು ಇತ್ತು ಎಂದರೆ ಸರಿ. 38 ಸೆಂಟ್ಸ್‌ನಲ್ಲಿ ಡೋರ್ ನಂಬರ್ 28, 29, 30 ಮತ್ತು 31 ಇರುತ್ತದೆ ಎಂದರೆ ಸಾಕ್ಷಿಯು ಇಲ್ಲ ಬರಿ ಮೂರು ಮನೆಗಳು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಮೂರು ಮನೆಗಳ ಡೋರ್ ನಂಬರ್ ಏನು ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ತಂದೆಯವರು ತೀರಿಕೊಂಡ ನಂತರ ನಾಲ್ಕು ಮನೆಗಳು ಯಾರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ದನದ ಗುಡಿಸಲು ಮತ್ತು ಒಂದು ಮನೆ ನನ್ನ ಹೆಸರಿನಲ್ಲಿ ಇರುತ್ತದೆ ಮತ್ತು ಒಂದು ಮನೆ ನನ್ನ ತಾಯಿಯ ಹೆಸರಿನಲ್ಲಿ ಇತ್ತು, ನಾವು ಎಲ್ಲರು ಕಲಿತು ಮಾಡುತ್ತಿದ್ದೆವು ನಾನು ನನ್ನ ತಾಯಿಯನ್ನು ನೋಡಿಕೊಂಡಿದ್ದರಿಂದ ನನ್ನ ಹೆಸರಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ಜೀವಂತ ಇರುವಾಗ ದಾವಾ ಆಸ್ತಿಯ 2 ನೇ ಅನುಸೂಚಿ ಆಸ್ತಿ ಸಿರಿಯಲ್ ನಂಬರ್ 1 ರಿಂದ 4 ನಿಮ್ಮ ಹೆಸರಿಗೆ ಬರಹದಲ್ಲಿ ಏನಾದರು ಮಾಡಿದ್ದರಾ ಎಂದರೆ ಸಾಕ್ಷಿಯು ಹೌದು ಬರಹದಲ್ಲಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ಸದರಿ ಮನೆಗಳು ಬರಹದಲ್ಲಿ ನಿಮ್ಮ ಹೆಸರಿಗೆ ಮಾಡಿರುತ್ತಾರೆ ಎಂದು ನೀವು ಹೇಳಿದ್ದು ಅದರ ಬಗ್ಗೆ ಏನಾದರು ದಾಖಲೆಗಳು ನ್ಯಾಯಾಲಯಕ್ಕೆ ಸಲ್ಲಿಸಿರುವಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಡೋರ್

ನಂಬರ್ 28, 29, 30 ಮತ್ತು 31 ನಿಮ್ಮ ಹೆಸರಿಗೆ ಮಾಡಿಸಿಕೊಳ್ಳುವಾಗ ನಿಮ್ಮ ತಾಯಿ ಮತ್ತು ಅಕ್ಕ ತಂಗಿಯರು ಮತ್ತು ಅಣ್ಣ ಅದಕ್ಕೆ ಒಪ್ಪಿಗೆ ನೀಡಿದ್ದರಾ ಎಂದರೆ ಸಾಕ್ಷಿಯು ಹೌದು ಒಪ್ಪಿಗೆ ನೀಡಿದ್ದರು ಎಂದು ನುಡಿಯುತ್ತಾರೆ. ಅವರು ಬರಹದಲ್ಲಿ ಒಪ್ಪಿಗೆ ನೀಡಿದ್ದರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಅವರು ಒಪ್ಪಿಗೆ ನೀಡಿಲ್ಲ ನಾನು ಅನಧಿಕೃತವಾಗಿ ಸದರಿ ಮನೆಗಳನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**7.** ಈಗ ಸಾಕ್ಷಿಗೆ ನಿಪಿಃ 37 ತೋರಿಸಿ ಅದರಲ್ಲಿ ಆಸ್ತಿ ನಂಬರ್ 27 ಕ್ಕೆ ಮಾಲೀಕರ ಮತ್ತು ಅನುಭವದಾರರ ಹೆಸರು 1986 ರಿಂದ 1999 ರವರೆಗೆ ಚಿಲಕುರಿ ವೆಂಕಣ್ಣ ತಂದೆ ಸತ್ಯನಾರಾಯಣ ಮತ್ತು ಆಸ್ತಿ ನಂಬರ್ 28 ಕ್ಕೆ ಮಾಲೀಕರ ಮತ್ತು ಅನುಭವದಾರರ ಹೆಸರು 1986 ರಿಂದ 1999 ರವರೆಗೆ ಚಿಲಕುರಿ ವೆಂಕಟೇಶ್ವರಲು ತಂದೆ ವೆಂಕಣ್ಣ ಎಂದು ನಮೂದು ಇದೆ ಎಂದರೆ ಸಾಕ್ಷಿಯು ಹೌದು ಭಾಗದ ನಂತರ ಎಂದು ನುಡಿಯುತ್ತಾರೆ. ನಿಪಿಃ 37 ರಲ್ಲಿ ಆಸ್ತಿ ನಂಬರ್ 27 ಕ್ಕೆ ತೋರಿಸಿರುವ ಮಾಲೀಕರ ಹೆಸರಾದ ಚಿಲಕುರಿ ವೆಂಕಣ್ಣ ತಂದೆ ಸತ್ಯನಾರಾಯಣ ನನ್ನ ತಂದೆ ಇರುತ್ತಾರೆ ಮತ್ತು ಆಸ್ತಿ ನಂಬರ್ 28 ರಲ್ಲಿ ತೋರಿಸಿರುವ ಮಾಲೀಕರ ಹೆಸರಾದ ಚಿಲಕುರಿ ವೆಂಕಟೇಶ್ವರಲು ನನ್ನ ಅಣ್ಣ ಇರುತ್ತಾರೆ ಎಂದರೆ ಸರಿ.

**(ಮುಂದುವರೆದ** ಪಾಟೀ ಸವಾಲಿಗೆ **ಕಾಲಾವಕಾಶ ಕೋರಿದ್ದು ಆಲಿಸಿ ನೀಡಲಾಯಿತು.)**

( ನನ್ನ ಹೇಳಿಕೆಯಂತೆ ಮುಕ್ತನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ,

ಸೀನಿಯರ್ ಸಿವಿಲ್ ನ್ಯಾಯಾಧೀಶರು, ಸಿರುಗುಪ್ಪ.